ನಿಲುವು, ಕೈಗೆಟಕಿತು ಅನ್ನುವಾಗ, ಕೂದಲೆಳೆಯ ಒಂದು ಕ್ಷಣ-ಅಲ್ಲಿಗೇ ಕುಸಿದು ಬಿದ್ದನಂತೆ!' ಅನ್ನುವ ಸಂದೇಶ, ಪಕ್ಕದ ಮನೆಯ ಅನ್ವರ್‌ನಿಂದ. ಫೋನಲ್ಲಿ ಕರೆದು ನಿಧಾನವಾಗಿ ಹೇಳಿದ್ದ, 'ಟೀಚರೇ, ಗಾಬರಿಯಾಗ್ಬೇಡಿ. ಕೂಡಲೇ ಸರಿಯಾದ ಆಸ್ಪತ್ರೆಗೆ ಒಯ್ದಿದಾರೆ. ಧೈರ್ಯವಾಗಿರಿ' ಎಂದ ಅವನ ದನಿಯಲ್ಲಿ ಅಡಕವಾದ ಅಧೀರತೆ ನನ್ನ ಗಮನಕ್ಕೂ ಬರುವಷ್ಟು ತೀವ್ರವಾಗಿತ್ತು. ಮತ್ತೆ ಹತ್ತೇ ನಿಮಿಷದಲ್ಲಿ ಮತ್ತೊಂದು ಕಾಲ್, 'ಮಾಡುವ ಪ್ರಯತ್ನ ಎಲ್ಲ ಮಾಡಿದ್ರಂತೆ. ಆದ್ರೂ... ಎಲ್ಲ ಮುಗೀತಂತೆ...' ಮೊದಲೇ ಕುಸಿದು ಕೂತಿದ್ದವಳು ಅಲ್ಲಿಗೇ ನೆಲಹಿಡಿದಿದ್ದೆ. ಇನ್ನೇನಾಗಲಿದೆ?

ನಾನು ಶಾಲೆಯಿಂದ ಬಂದು ನನ್ನ ಮನೆಯ ಮೆಟ್ಟಿಲೇರುವಾಗಲೇ ಪಕ್ಕದ ಮನೆಯಲ್ಲೇನೋ ವ್ಯತ್ಯಾಸವಿದೆ ಅಂತನಿಸಿತ್ತು. ಅದಾಗಲೇ ಮಾಲಕ್ಕ ಮತ್ತು ಚಂದ್ರಣ್ಣ ಕರೆ ಬಂದು ಮ್ಯಾಚ್ ನಡೀತಾ ಇದ್ದ ತ್ರಿಶೂರಿಗೆ ಹೋಗಿಯಾಗಿತ್ತು. ಏನು ಮಾಡ್ತಾರೆ, ಹೇಗೆ

